ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ದಾಂಡೇಲಿ

ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ. 731-2020

............................ ವಿರುದ್ಧ .............................

PW 02
CW 02

ಸಾಕ್ಷಿಯ ಹೆಸರು : ರಾಮ ಪಾಂಡುರಂಗ ನಾಯ್ಕ
ತಂದೆಯ ಹೆಸರು : ಪಾಂಡುರಂಗ ನಾಯ್ಕ
ವಯಸ್ಸು : 46 ವರ್ಷ
ಉದ್ಯೋಗ : ಸಿಪಾಯಿ
ವಾಸ್ತವ್ಯ : ರಾಮನಗರ, ಜೋಯಿಡಾ.

ದಿನಾಂಕಃ 18-06-2024 ರಂದು ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು .

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರುಃ**

ಚಾಸಾ. 3 ರವರು ಪರಿಚಯ ಇದೆ. ದಿಃ 12-04-2020 ರಂದು ನನ್ನನ್ನು ಹಾಗೂ ಚಾಸಾ. 3 ರವರನ್ನು ಪೊಲೀಸರು ನಮ್ಮನ್ನು ಠಾಣೆಗೆ ಬರಮಾಡಿಕೊಂಡು ಪ್ರಕರಣದ ಮಾಹಿತಿಯನ್ನು ತಿಳಿಸಿ, ಪಂಚರಾಗಲು ಕೋರಿ ಅವರು ಒಪ್ಪಿದ ಮೇರೆಗೆ, ಸಂಜೆ 5-30 ಗಂಟೆಗೆ ನಾವು , ಚಾಸಾ. 3, 4 ಮತ್ತು ಪೊಲೀಸ ಸಿಬ್ಬಂದಿಗಳು ಸೇರಿ ಇಲಾಖಾ ವಾಹನದಲ್ಲಿ ಆನಮೋಡಗೆ ಹೋಗಿರುತ್ತೇವೆ. ಆರೋಪಿಯ ಮನೆಗೆ ಸಂಜೆ 6-20 ಕ್ಕೆ ತಲುಪಿರುತ್ತೇವೆ. ನಂತರ ಪೊಲೀಸರು ಆರೋಪಿಯನ್ನು ವಿಚಾರಿಸಿದಾಗ ಆರೋಪಿ ತನ್ನ ಹೆಸರು ಮತ್ತು ವಿಳಾಸವನ್ನು ತಿಳಿಸಿರುತ್ತಾನೆ. ಆತನನ್ನು ಪ್ರಶ್ನಿಸಿದಾಗ ಸಂಪರ್ಕ ಉತ್ತರ ಇಲ್ಲದೇ ಇರುವ ಕಾರಣ, ನಮ್ಮ ಸಮಕ್ಷಮ ಮನೆಯ ಸುತ್ತ ಮುತ್ತ ಹುಡುಕಿದಾಗ, ಮನೆಯ ಹಿಂದೆ ಕಂಪೌಂಡನ ಒಳಗೆ ಹುಡುಕಿದಾಗ, ಕಸದ ರಾಶಿಯು ಇದ್ದು, ಅದರಲ್ಲಿ ಏನು ಇದೆ ಎಂದು ವಿಚಾರಿಸಿದಾಗ ಕಸ ಇರುತ್ತದೆ ಎಂದು ತಿಳಿಸಿರುತ್ತಾರೆ. ಪೊಲೀಸರು ಅನುಮಾನಸ್ಪದವಾಗಿ ಸದ್ರಿ

ರಾಶಿಯನ್ನು ಪರಿಶೀಲಿಸಲಾಗಿ, ಎಂಟು ಬಿಳಿಯ ಬಣ್ಣದ ರಟ್ಟಿನ ಬಾಕ್ಸಗಳು ಇರುವುದು ಕಂಡು ಬಂದಿರುತ್ತದೆ.

ನಂತರ ರಟ್ಟಿನ ಬಾಕ್ಸಗಳನ್ನು ನಮ್ಮ ಸಮಕ್ಷಮ ತೆಗೆದು ನೋಡಿದಾಗ ರಾಯಲ್ ಟ್ಯಾಗ್ಸನ ಮತ್ತು ಓಲ್ಡ ಬಿಲ್ಲ ಸ್ಪೇಷಲ್ ವಿಸ್ಕಿಯ ಇರುವುದು ಕಂಡು ಬಂದಿರುತ್ತದೆ. ಮತ್ತೊಂದು ಬ್ರಾಂಡ ಇದ್ದು ಅದು ನನಗೆ ನೆನಪಿಲ್ಲಾ. ಒಂದು ಬಾಕ್ಸನಲ್ಲಿ ಕೇವಲ ಒಂದು ರಾಯಲ್ ಟ್ಯಾಗ್ಸ ಇರುತ್ತದೆ. ನಂತರ ನಮ್ಮ ಸಮಕ್ಷಮ ಪ್ರತಿಯೊಂದು ಬಾಕ್ಸನಿಂದ ತಲಾ ಎರಡು ಬಾಟಲಿಗಳು ಹಾಗೂ ಒಂದು ಬಾಟಲಿ ಇದ್ದ ಬಾಕ್ಸನಿಂದ ಒಂದು ಬಾಟಲಿಯನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿಯನ್ನು ತೆಗೆದು, ಹಾಗೂ ಅವುಗಳನ್ನು ಬಿಳಿ ಬಟ್ಟೆಗಳಲ್ಲಿ ಸುತ್ತಿ ಸೀಲ್ ಮಾಡಿ ನನ್ನ ಹಾಗೂ ನಮ್ಮ ಸಹಿವುಳ್ಳ ಚೀಟಿಯನ್ನು ಅಂಟಿಸಿರುತ್ತಾರೆ. ಉಳಿದ ಬಾಟಲಿಗಳಿಗೂ ಸಹ ಬಿಳಿ ಬಟ್ಟೆಗಳಲ್ಲಿ ಸುತ್ತಿ ಸೀಲ ಮಾಡಿ ನನ್ನ ಹಾಗೂ ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಿರುತ್ತಾರೆ. ನಂತರ ಆರೋಪಿಯು ಕೃತ್ಯಕ್ಕೆ ಉಪಯೋಗಿಸಿದ ವಾಹನವನ್ನು ಕೇಳಲಾಗಿ, ಅದು ಸ್ಥಳದಲ್ಲಿಯೇ ಇದ್ದು ,ಅದನ್ನು ಸಹ ನಮ್ಮ ಸಮಕ್ಷಮ ವಶಕ್ಕೆ ಪಡೆದುಕೊಂಡಿರುತ್ತಾರೆ. ನಂತರ ರಾತ್ರಿ 06-40 ರಿಂದ 09-30 ರವರೆಗೆ ಪಂಚನಾಮೆಯನ್ನು ಜರುಗಿಸಿ ನಂತರ ಆರೋಪಿ ಹಾಗೂ ಮಧ್ಯವನ್ನು ವಶಪಡಿಸಿಕೊಂಡಿರುತ್ತಾರೆ. ಸದ್ರಿ ಮಧ್ಯವನ್ನು ಆರೋಪಿಯು ಗೋವಾದಿಂದ ತನ್ನ ವಾಹನ ಸಂಖ್ಯೆ ಜಿಎ-01-ಇ-2397 ನೇದ್ದರಲ್ಲಿ ತಂದಿರುವುದಾಗಿ ತಿಳಿಸಿರುತ್ತಾನೆ. ಮುದ್ದೆ ಮಾಲಗಳ ಮೇಲೆ ಕೇವಲ ಗೋವಾ ರಾಜ್ಯದಲ್ಲಿ ಮಾತ್ರ ಮಾರಾಟಕ್ಕೆಂದು ಬರೆಯಲಾಗಿತ್ತು.

ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ನನ್ನ ಸಹಿಯನ್ನು ಗುರುತನ್ನು ನಿಪಿ 1 ಬಿ ಎಂದು

ಗುರುತಿಸಲಾಯಿತು. ವಶಪಡಿಸಿಕೊಂಡ ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ ಮಾದರಿ ಬಾಟಲಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಒಟ್ಟಾಗಿ ಮು. ಮಾ 1 ಎಂದು ಗುರುತಿಸಲಾಗಿದ್ದು, ನನ್ನ ಸಹಿಗಳನ್ನು ಒಟ್ಟಾಗಿ ಮು. ಮಾ 1(ಬಿ) ಎಂದು ಗುರುತಿಸಲಾಯಿತು. ವಶಪಡಿಸಿಕೊಂಡ ಓಮಿನಿ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಈ ದಿನ ಗೈರು ಹಾಜರಿದ್ದು, ಅವರ ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರಿಂದ ಯಾವುದೇ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ. ವಿ.ಎಸ್.ಜೆ. ವಕೀಲರಿಂದ.**

1. ನಾನು ರಾಮನಗರದ ಪಂಚಾಯಿತಿಯಲ್ಲಿ ಸಿಪಾಯಿ ಎಂದು ಕೆಲಸ ಮಾಡುತ್ತಿದ್ದೇನೆ. ನಮ್ಮ ಕಚೇರಿಯ ಸಮಯ ಬೆಳಿಗ್ಗೆ 9-00 ಯಿಂದ ಸಂಜೆ 5-30 ಗಂಟೆಯವರೆಗೆ ಇರುತ್ತದೆ. ನಾನು 7 ನೇ ತರಗತಿವರೆಗೆ ಓದಿದ್ದೇನೆ. ನನಗೆ ಕನ್ನಡ ಓದಲು ಬರುತ್ತದೆ. ಬರೆಯಲು ಅಷ್ಟಾಗಿ ಬರುವುದಿಲ್ಲ. ಪೊಲೀಸರು ನಮ್ಮ ಕಚೇರಿಗೇ ಸಂಜೆ 5-15 ಗಂಟೆಗೆ ಬಂದಿರುತ್ತಾರೆ. ನಮ್ಮ ಕಚೇರಿಯಲ್ಲಿ ರಜೆಯನ್ನು ತೆಗೆದುಕೊಳ್ಳಲು ಅರ್ಜಿಯನ್ನು ನೀಡಬೇಕಾಗುತ್ತದೆ ಎಂದರೆ ಸರಿ. ಪೊಲೀಸರು ನಮ್ಮ ಪಿ.ಡಿ.ಓ ರವರಿಗೆ ಮಾತಾನಾಡಿರುತ್ತಾರೆ. ಅವರಿಗೆ ಕಚೇರಿಯ ಸಿಬ್ಬಂದಿಗಳನ್ನು ಪಂಚರಾಗಿ ಕೋರಲು ಯಾವುದೇ ಪತ್ರವನ್ನು ನೀಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಮಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ. ಚಾಸಾ 3 ರವರು ಸಹ ನಮ್ಮ ಪಂಚಾಯಿತಿಯಲ್ಲಿ ಕೆಲಸ ಮಾಡುತ್ತಾರೆ. ಚಾಸಾ. 11 ರವರು ನಮಗೆ ಪಂಚರಾಗಲು ಕೋರಿಕೊಂಡಿರುತ್ತಾರೆ. ಆರೋಪಿಯು ಸುಮಾರು 7-8 ವರ್ಷಗಳಿಂದ ನಮ್ಮ ಕಚೇರಿಗೆ ಬರುತ್ತಿದ್ದರಿಂದ ಪರಿಚಯ ಇರುತ್ತಾರೆ. ಆರೋಪಿಯು ಸಮಾಜ ಸೇವಕರಾಗಿರುತ್ತಾರೆ

ಎಂದರೆ ಸರಿ. ಕಚೇರಿಯಿಂದ 5-20 ಕ್ಕೆ ಪೊಲೀಸ ಠಾಣೆಗೆ ಹೋಗಿ ಅಲ್ಲಿಂದ 5-30 ಗಂಟೆಗೆ ಬಂದಿರುತ್ತೇವೆ. ಠಾಣೆಯಲ್ಲಿ ನಮ್ಮ ಒಂದಿಗೆ ಚಾಸಾ 1 ರವರು ಮಾತನಾಡಿರುತ್ತಾರೆ. ಠಾಣೆಯಲ್ಲಿ ಸುಮಾರು ಎಷ್ಟು ಜನರು ಇದ್ದರು ಎಂದು ನನಗೆ ಗೊತ್ತಿಲ್ಲ. ಪೊಲೀಸ ಠಾಣೆಯಲ್ಲಿ ಕೇವಲ ಒಂದು ಜೀಪ ನಿಂತಿತ್ತು. ಜೀಪನಲ್ಲಿ ನಾನು, ಚಾಸಾ 3, 1,4, 11 ಹಾಗೂ ಇನ್ನು ಇಬ್ಬರು ಪೊಲೀಸ ಸಿಬ್ಬಂದಿಯವರು ಸೇರಿ ಹೋಗಿರುತ್ತೇವೆ. ಚಾಸಾ 4 ರವರು ಜೀಪನ ಮುಂಭಾಗದಲ್ಲಿ, ಮಧ್ಯದಲ್ಲಿ ಚಾಸಾ 1 ಮತ್ತು 11 ರವರು, ಹಿಂಭಾಗದಲ್ಲಿ ನಾನು, ಚಾಸಾ 3 ಹಾಗೂ ಇಬ್ಬರು ಸಿಬ್ಬಂದಿಯವರು ಕುಳಿತ್ತಿರುತ್ತೇವೆ. ಸದ್ರಿ ವಾಹನವೂ ಬೂಲೇರೋ ಕಂಪನಿಯದ್ದಾಗಿರುತ್ತದೆ. ಬೂಲೇರೋದ ಹಿಂಭಾಗದಲ್ಲಿ ಒಬ್ಬ - ಒಬ್ಬರು ಕೂರುವ ಸೀಟಗಳು ಇರುತ್ತದೆ ಎಂದರೆ ಸರಿ.

2. ರಾಮನಗರದಿಂದ ಆನಮೋಡ ಸುಮಾರು 25 ಕಿ.ಮೀ ದೂರದಲ್ಲಿದೆ. ತಲುಪಲು ಸುಮಾರು 35-40 ನಿಮಿಷ ತಗಲಿರುತ್ತದೆ. ಆ ಕಾಲಕ್ಕೆ ರಾಷ್ಟ್ರೀಯ ಹೆದ್ದಾರಿಯ ಕೆಲಸ ಆಗಿರುವುದಿಲ್ಲ. ತಿನ್ನೈಘಾಟನ ಬಳಿಕ ರಸ್ತೆ ಕೆಟ್ಟಿದ್ದು, ರಾಮನಗರದಿಂದ ಆನಮೋಡ ತಲುಪಲು ಸುಮಾರು ಒಂದೂವರೆ ಗಂಟೆ ಬೇಕಾಗುತ್ತದೆ ಎಂದರೆ ಸರಿ. ಹಾಗಾಗಿ ಆನಮೋಡಕ್ಕೆ 7-00 ಗಂಟೆಯ ಬಳಿಕವೇ ತಲುಪ ಬೇಕಾಗುತ್ತದೆ ಎಂದರೆ ಸರಿ. ಪಂಚನಾಮೆಯಲ್ಲಿ 6-20 ಗಂಟೆಗೆ ತಲುಪಿರುತ್ತವೆ ಎಂದು ತಿಳಿಸಿರುವುದರಿಂದ ನನ್ನ ಮುಖ್ಯ ವಿಚಾರಣೆಯಿಲ್ಲಿಯು ಸಹ 6-20 ಎಂದು ತಿಳಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾವು 6-20 ಗಂಟೆಗೆ ತಲುಪಿರುತ್ತೇವೆ ಎಂದು ನುಡಿಯುತ್ತಾರೆ.

3. ಆರೋಪಿಯ ಮನೆಯಲ್ಲಿ ಆರೋಪಿ ಇದ್ದರೂ ಬೇರೆ ಯಾರೆಲ್ಲಾ ಇದ್ದರು ಎಂದು ನನಗೆ ನೆನಪಿಲ್ಲಾ. ಅವರ ಮನೆ ಮುಂಭಾಗದಲ್ಲಿ ಅರಣ್ಯ ಇಲಾಖೆ ಹಾಗೂ ಅಬಕಾರಿ ಚೆಕ್ಕ ಪೋಸ್ಟಗಳು ಸುಮಾರು 10-15 ನಿಮಿಷಗಳ ದೂರದಲ್ಲಿ ಇರುತ್ತವೆ. ಆರೋಪಿಯ ಮನೆಯು ಗೋವಾ ರಸ್ತೆಗೆ ಮುಖ ಮಾಡಿ ಇರುತ್ತದೆ. ಆರೋಪಿಯ ಮನೆಯ ಮುಂಭಾಗ ಹಾಗೂ ಹಿಂಭಾಗದಲ್ಲಿ ಎಷ್ಟು ಖುಲ್ಲಾ ಜಾಗ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಆರೋಪಿಯ ಮನೆಯ ಬಲಬದಿಯಲ್ಲಿ ಒಂದು ಚಹಾ ಅಂಗಡಿ ಇರುತ್ತದೆ. ಆರೋಪಿಯ ಮನೆಯ ವಿಸ್ತೀರ್ಣ ನನಗೆ ಗೊತ್ತಿಲ್ಲ. ಆರೋಪಿಯು ಮನೆಯ ಒಳಗಡೆ ಇದ್ದರು. ಅವರನ್ನು ಮೊದಲು ಚಾಸಾ 1 ರವರು ನೋಡಿರುತ್ತಾರೆ. ದಾಳಿಯ ಕಾಲಕ್ಕೆ ಆರೋಪಿಯನ್ನು ಹೊರತುಪಡಿಸಿ ಒಬ್ಬರು ಹೆಂಗಸು ಮನೆಯಿಂದ ಹೊರಗೆ ಬಂದಿರುತ್ತಾರೆ. ಪೊಲೀಸ ಅಧಿಕಾರಿಗಳು ಆರೋಪಿಯ ಮನೆಯ ಒಳಗೆ ಹೋಗಿರುವುದಿಲ್ಲ ಗ್ಯಾಲರಿಯಲ್ಲಿ ಕುಳಿತಿರುತ್ತಾರೆ. ಗ್ಯಾಲರಿ ಎಷ್ಟು ವಿಸ್ತೀರ್ಣ ಹೊಂದಿತ್ತು ನನಗೆ ಗೊತ್ತಿಲ್ಲ. ಆರೋಪಿಯ ಮನೆಯ ತೆಗ್ಗಿನಲ್ಲಿ ಇರುತ್ತದೆ. ಅದಕ್ಕೆ ಮೆಟ್ಟಲುಗಳು ಇರುವುದಿಲ್ಲ. ಮನೆಯ ಕಂಪೌಂಡ ಗೋಡೆಯ ಬದಿಯಲ್ಲಿ ಕಸದಲ್ಲಿ ಮುದ್ದೆ ಮಾಲು ಇರುತ್ತವೆ. ಅಲ್ಲಿಗೆ ಹೋಗಲು ಮನೆಯ ಹೊರಗಿನಿಂದಲೂ ಜಾಗ ಇರುತ್ತದೆ. ಮನೆಯ ಹಿಂಭಾಗಕ್ಕೆ ಮಾತ್ರ ಕಂಪೌಂಡ ಇರುತ್ತದೆ. ಎಷ್ಟು ಅಡಿಯ ಕಂಪೌಂಡ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಟೇಪಿನಿಂದ ಕಂಪೌಂಡನ್ನಾಗಲಿ ಅಥವಾ ಮನೆಯ ಬೇರೆ ಯಾವದನ್ನು ಅಳತೆ ಮಾಡಿರುವುದಿಲ್ಲ. ಮನೆಯಿಂದ ರಸ್ತೆ ಎಷ್ಟು ದೂರದಲ್ಲಿರುತ್ತದೆ ಎಂದು ನನಗೆ ನೆನಪಿಲ್ಲಾ.

4. ಪಂಚನಾಮೆಯಲ್ಲಿ ಪ್ರತಿ ಬಾಟಲಿಗಳ ಬೆಲೆಯನ್ನು ಬರೆದಿರುತ್ತಾರೋ ಇಲ್ಲವೋ ನನಗೆ ನೆನಪಿಲ್ಲಾ. ಪ್ರತಿ ಬಾಟಲಿಗಳ ಬೆಲೆಯನ್ನು ನಾವು ನೋಡಿ ಪೊಲೀಸರಿಗೆ ತಿಳಿಸಿರುವುದಿಲ್ಲ. ಎಲ್ಲಾ ಬಾಟಲಿಗಳನ್ನು ನಾನು ಮತ್ತು ಚಾಸಾ. 1, 3 ರವರು ಸೇರಿ ಕಂಪೌಂಡ ಒಳಗೆ ಏಣಿಸಿರುತ್ತೇವೆ. ಯಾವ ಬಾಕ್ಸಗಳ ಮೇಲೆ ಯಾವ ಬಾಕ್ಸಗಳು ಇದ್ದವು ಎಂದು ನನಗೆ ಹೇಳಲು ಆಗುವುದಿಲ್ಲ. ಓಮಿನಿ ಕಾರ ಮನೆಯ ಮುಂಭಾಗದಲ್ಲಿ ಇತ್ತು. ಸದ್ರಿ ವಾಹನವನ್ನು ನಾವು ಚಾಲು ಮಾಡಿ ನೋಡಿರುವುದಿಲ್ಲ. ಸದ್ರಿ ವಾಹನದ ಒಳಗೆ ಯಾವ ವಸ್ತುಗಳು ಇದ್ದವು ಎಂದು ನಾವು ಪರಿಶೀಲಿಸಿರುತ್ತೇವೆ. ಅದರ ಒಳಗೆ ಏನು ಇತ್ತು ಎಂದು ನನಗೆ ನೆನಪಿಲ್ಲಾ. ಮಧ್ಯದ ಬಾಗಿಲನ್ನು ಚಾಸಾ .1 ರವರು ತೆಗೆದಿರುತ್ತಾರೆ ಮುಂದಿನ ಬಾಗಿಲನ್ನು ತೆಗೆದಿರುವುದಿಲ್ಲ. ಚಾವಿಯನ್ನು ಆರೋಪಿ ನೀಡಿರುತ್ತಾರೆ. ಸದ್ರಿ ವಿಷಯವನ್ನು ಪಂಚನಾಮೆಯಲ್ಲಿ ಬರೆದಿತ್ತಾರೋ ಇಲ್ಲವೋ ನನಗೆ ನೆನಪಿಲ್ಲಾ. ವಾಹನದ ಮೇಲೆ ಯಾವ ಅಕ್ಷರಗಳನ್ನು ಬರೆಯಲಾಗಿತ್ತು ಎಂದು ನನಗೆ ನೆನಪಿಲ್ಲಾ. ಸದ್ರಿ ಅಕ್ಷರಗಳನ್ನು ಪಂಚನಾಮೆಯಲ್ಲಿ ಬರೆಸಿರುತ್ತೇನೆ ಇಲ್ಲವೋ ಎಂದು ನನಗೆ ನೆನಪಿಲ್ಲಾ. ವಾಹನದ ಸಂಖ್ಯೆಯನ್ನು ಚಾಸಾ 3 ರವರಿಗೆ ಪೊಲೀಸರಿಗೆ ತಿಳಿಸಿದ್ದು, ನಿನ್ನೆ ರಾತ್ರಿ ಚಾಸಾ 3 ರವರಿಗೆ ಕರೆ ಮಾಡಿ ನನಗೆ ತಿಳಿಸಿರುತ್ತಾರೆ. ಅಂತೆಯೇ ಉಳಿದ ವಿಷಯಗಳನ್ನು ಸಹ ಚಾಸಾ. 3 ರವರು ನಿನ್ನೆ ರಾತ್ರಿ ನನಗೆ ತಿಳಿಸಿದ್ದರಿಂದ ಈ ದಿನ ಸಾಕ್ಷ್ಯವನ್ನು ನಿಖರವಾಗಿ ನುಡಿಯುತ್ತಿದ್ದೇನೆ ಎಂದರೆ ಸರಿ.

5. ಓಮಿನಿ ವಾಹನದ ಕಿಮ್ಮತ್ತನ್ನು ನಾನು ಪಂಚನಾಮೆಯ ಕಾಲಕ್ಕೆ ತಿಳಿಸಿರುವುದಿಲ್ಲ. ವಾಹನದ ಚೆಸ್ಸಿ ನಂಬರ ಸಂಖ್ಯೆಯನ್ನು ನಾನು ನೋಡಿರುವುದಿಲ್ಲ. ಆರೋಪಿಯ ಮನೆಯ ಚೆಕ್ಕ

ಬಂದಿ ಪೂರ್ವಕ್ಕೆ ಮನೆ , ಪಶ್ಚಿಮಕ್ಕೆ ಗೋವಾ ರಸ್ತೆ, ಉತ್ತರಕ್ಕೆ ಒಂದು ಅಂಗಡಿ, ದಕ್ಷಿಣಕ್ಕೆ ಕಂಪೌಂಡ ಇರುತ್ತದೆ. ಸದ್ರಿ ಚೆಕ್ಕ ಬಂದಿಯನ್ನು ಪಂಚನಾಮೆಯಲ್ಲಿ ಬರೆದಿರುತ್ತಾರೋ ಇಲ್ಲವೋ ನನಗೆ ನೆನಪಿಲ್ಲಾ. ಪಂಚನಾಮೆಯ ಕಾಲಕ್ಕೆ ಪೋಟೋವನ್ನು ತೆಗೆದಿರುವುದಿಲ್ಲ. ಮುದ್ದೆ ಮಾಲು ಸಿಕ್ಕ ಸ್ಥಳದಲ್ಲಿ ಸಹ ಪೋಟೋವನ್ನು ತೆಗೆದಿರುವುದಿಲ್ಲ. ಆರೋಪಿಯ ಮನೆಯ ಮುಂಭಾಗದಲ್ಲಿ ಆರೋಪಿ, ಪಂಚರು, ಪೊಲೀಸರು ಸಿಬ್ಬಂದಿಗಳನ್ನು ನಿಲ್ಲಿಸಿ ಪೋಟೋವನ್ನು ತೆಗೆದಿರುವುದಿಲ್ಲ. ಅಬಕಾರಿ ಇಲಾಖೆ ಅಥವಾ ಅರಣ್ಯ ಇಲಾಖೆಯವರು ದಾಳಿಯ ಕಾಲಕ್ಕೆ ಬಂದಿರುವುದಿಲ್ಲ. ಕಂಪ್ಯೂಟರ ಸಮೇತ ಪೋಟೋವನ್ನು ತೆಗೆದಿರುವುದಿಲ್ಲ. ಕಂಪ್ಯೂಟರ ಪೊಲೀಸರ ಕೈಯಲ್ಲಿದ್ದು ಅವರ ಹೆಸರು ನನಗೆ ನೆನಪಿಲ್ಲಾ. ಕಂಪ್ಯೂಟರ ಯಾವ ಕಂಪನಿಗೆ ಸೇರಿರುತ್ತದೆ ಎಂದು ನಾನು ನೋಡಿಲ್ಲ. ಪಂಚನಾಮೆಯ ಪ್ರಿಂಟನ್ನು ಘಟನಾ ಸ್ಥಳದಲ್ಲಿಯೇ ತೆಗೆದಿರುತ್ತಾರೆ. ಪ್ರೀಂಟರನ್ನು ಗ್ಯಾಲರಿಯಲ್ಲಿ ಅಳವಡಿಸಿರುತ್ತಾರೆ. ಸದ್ರಿ ವಿಷಯವನ್ನು ಪಂಚನಾಮೆಯಲ್ಲಿ ಬರೆದಿರುವುದಿಲ್ಲ.

6. ಘಟನಾ ಸ್ಥಳದ ಅಕ್ಷಾಂಶ ಮತ್ತು ರೇಖಾಂಶ ಸಂಖ್ಯೆಯನ್ನು ನನಗೆ ನೆನಪಿಲ್ಲಾ. ಪೊಲೀಸರು ಸದ್ರಿ ಸಂಖ್ಯೆಯನ್ನು ಕಂಡು ಹಿಡಿದಿರುತ್ತಾರೆ. ಮು . ಮಾ 1 ಸಹಿಯನ್ನು ಠಾಣೆಯಲ್ಲಿ ಪ್ರಿಂಟ ತೆಗೆಯಲಾಗಿರುತ್ತದೆ ಎಂದರೆ ಸರಿಯಲ್ಲ. ಸದ್ರಿ ಪ್ರಿಂಟನ್ನು ಘಟನಾ ಸ್ಥಳದಲ್ಲಿ ತೆಗೆದಿರುತ್ತಾರೆ. ನಾನು ಸ್ಥಳದಲ್ಲಿಯೇ ಸಹಿ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಮುದ್ದೆ ಮಾಲು ಸಿಕ್ಕಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಂತೆಯೇ ಸ್ಥಳದಲ್ಲಿ ಪ್ರಿಂಟ ತೆಗೆದಿರುತ್ತಾರೆ ಎಂದು

ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ಓಮಿನಿ ಕಾರ ಸಿಕ್ಕಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನಗೆ ಪರಿಚಯ ಇರುವುದರಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಿಂಟನ್ನು ಠಾಣೆಯಲ್ಲಿ ತೆಗೆದು ಸಹಿ ಮಾಡಿದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

ಸಹಿ ಇದೆ

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ದಾಂಡೇಲಿ.